# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

೯ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ:18.05.2016ರಂದು ಮಧ್ಯಾಹ್ನ 3.00 ಗಂಟೆಗೆ ಎ.ಆರ್.ಐ ಸಭಾಂಗಣದಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ನಿಗಮದ 212ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳು:**

**ಹಾಜರಾತಿ**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಗಂಗಾರಾಂ ಬಡೇರಿಯಾ, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ | ನಿರ್ದೇಶಕರು. |
| ಶ್ರೀ ಬೋಜ್ಯನಾಯಕ್, ಡಿ.ಐ.ಜಿ.ಆರ್<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ನಿರ್ದೇಶಕರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ನಿರ್ದೇಶಕರು |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ನಿರ್ದೇಶಕರು |
| ಶ್ರೀ ಅರ್ಜುನ್ ಸಾಗರ್, | ನಿರ್ದೇಶಕರು |
| ಶ್ರೀ ಮಲ್ಲಪ್ಪ ಯಲವ್ವ ಬೆಳವಡಿ | ನಿರ್ದೇಶಕರು |
| ಶ್ರೀ ಪುಟ್ಟಸ್ವಾಮಿ ಹೆಚ್ | ನಿರ್ದೇಶಕರು |
| ಶ್ರೀ ವಿ.ಆರ್.ವಿಜಯಕುಮಾರ್ | ನಿರ್ದೇಶಕರು |

**ಗೈರು ಹಾಜರಿ:**

| | |
|---|---|
| ಶ್ರೀಮತಿ ಎಸ್.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, | ನಿರ್ದೇಶಕರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ನಿರ್ದೇಶಕರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ | ನಿರ್ದೇಶಕರು |

ಮಾನ್ಯ ಅಧ್ಯಕ್ಷರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಸರ್ಕಾರದಿಂದ ನೂತನವಾಗಿ ನಾಮ ನಿರ್ದೇಶನ ಮಾಡಿರುವ ನಿರ್ದೇಶಕರಿಗೆ ಶುಭಾಶಯಗಳನ್ನು ತಿಳಿಸಿ ಸ್ವಾಗತ ಕೋರಿದರು. ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಾಜರಿದ್ದ ನಿರ್ದೇಶಕರ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಕಇ 112 ಎಸ್‌ಡಿಸಿ 2016, ದಿನಾಂಕ:07.04.2016ರನ್ವಯ ನೂತನವಾಗಿ ನಾಮ ನಿರ್ದೇಶನಗೊಂಡಿರುವ ಶ್ರೀ ಅರ್ಜುನ್ ಸಾಗರ್, ಶ್ರೀ ಮಲ್ಲಪ್ಪ ಯಲವ್ವ ಬೆಳವಡಿ, ಶ್ರೀ ಪುಟ್ಟಸ್ವಾಮಿ ಹೆಚ್ ಹಾಗೂ ಶ್ರೀ ವಿ.ಆರ್.ವಿಜಯಕುಮಾರ್ ಇವರುಗಳನ್ನು ನಿರ್ದೇಶಕರ ಮಂಡಳಿಗೆ ಸೇರಿಸಿಕೊಳ್ಳಲಾಯಿತು. ನಂತರ ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡು ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 212ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 212ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 01: 211ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

* * * * *

ದಿನಾಂಕ:22.03.2016 ರಂದು ನಡೆದ 211ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: 1 : ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ:2: ನಿಗಮದ 211ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ**

ಕಳೆದ ಸಭೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದ್ದ 18 ವಿಷಯಗಳಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲಾಯಿತು. ಸಭೆಯು ಅನುಸರಣಾ ವರದಿಗಳನ್ನು ಪರಾಮರ್ಶಿಸಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 03 : ಸರ್ಕಾರದಿಂದ 2015–16ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಗೆ ಕ್ಯಾಪಿಟಲ್ ಹೆಡ್‌ನಲ್ಲಿ ಅವಧಿಸಾಲದ ಬಾಬ್ತಿಗೆ ರೂ.29.00 ಕೋಟಿ ಅನುದಾನ ಬಿಡುಗಡೆಯಾಗಿರುವುದರಿಂದ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ನಿಗಮದಿಂದ ಪಡೆಯಲಾಗಿದ್ದ ಅವಧಿಸಾಲ ಹಣವನ್ನು ಹಿಂದುರುಗಿಸುವ ಬಗ್ಗೆ**

ಡಾ:ಬಿ.ಆರ್.ಅಂಬೇಡ್ಕರ್ ನಿಗಮವು 1984ನೇ ಸಾಲಿನಿಂದ ಗಂಗಾ ಕಲ್ಯಾಣ ಯೋಜನೆಯಡಿ ರಾಜ್ಯದ ಪರಿಶಿಷ್ಟ ಜಾತಿ ಫಲಾಪೇಕ್ಷಿಗಳಿಗೆ ಕೊಳವೆಬಾವಿ ಸೌಲಭ್ಯ ಕಲ್ಪಿಸುತ್ತಾ ಬರುತ್ತಿದೆ. ಈ ಯೋಜನೆಯಡಿ ಘ'ಟಕ ವೆಚ್ಚ ರೂ 2.00 ಲಕ್ಷಗಳು ಇದ್ದು, ಇದರಲ್ಲಿ ನಿಗಮವು ಸಹಾಯಧನ ರೂ 1.50 ಲಕ್ಷ ಮತ್ತು ರೂ 0.50 ಲಕ್ಷ ಅವಧಿಸಾಲವಾಗಿರುತ್ತದೆ. ಅವಧಿ ಸಾಲದ ಹಣವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಸಂಸ್ಥೆ ಹಿಂದಿನಿಂದಲೂ ನೀಡುತ್ತಿದೆ. ಈಗ ನಿಗಮದಲ್ಲಿ ರೂ 30.50 ಕೋಟಿಗಳು NSCFDC ಅವಧಿಸಾಲ ಬಾಕಿ ಉಳಿದಿರುತ್ತದೆ.

ಸದರಿ ಯೋಜನೆಯಡಿ ಸರ್ಕಾರವು ದಿನಾಂಕ:06.01.2016ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ಘಟಕ ವೆಚ್ಚ ರೂ 3.50 ಲಕ್ಷಕ್ಕೆ ಹೆಚ್ಚಿಸಿ ಮಂಜೂರಾತಿ ಆದೇಶ ಹೊರಡಿಸಲಾಗಿದೆ. ಉಳಿದ 24 ಜಿಲ್ಲೆಗಳಲ್ಲಿ ರೂ 2.00 ಲಕ್ಷ ಘಟಕ ವೆಚ್ಚ ಇದ್ದು, ಹೆಚ್ಚಿನ ಪ್ರಕರಣಗಳಲ್ಲಿ ರೂ 1.50 ಲಕ್ಷ ಸಹಾಯಧನ ಮಿತಿಯಲ್ಲಿ ಘಟಕ ಪೂರ್ಣಗೊಳಿಸಲಾಗುತ್ತಿದೆ. NSCFDCಯಿಂದ ಪಡೆದ ಹಣಕ್ಕೆ ನಿಗಮವು ಶೇ.3ರಷ್ಟು ಬಡ್ಡಿಯೊಂದಿಗೆ ಸಾಲ ಮರುಪಾವತಿ ಮಾಡಲಾಗುತ್ತಿದೆ.

ಆದ್ದರಿಂದ ನಿಗಮದಲ್ಲಿ ಕೊಳವೆಬಾವಿ ಕೊರೆಯಲು ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಸಹಾಯಧನ ಮಿತಿಯಲ್ಲಿ ಹೆಚ್ಚಿನ ಕೊಳವೆಬಾವಿಗಳನ್ನು ಪೂರ್ಣಗೊಳಿಸುತ್ತಿರುವುದರಿಂದ NSCFDC ಸಾಲದ ಅವಶ್ಯಕತೆ ಕಡಿಮೆ ಇರುತ್ತದೆ. ಈ ಹಿಂದೆ ಘಟಕ ವೆಚ್ಚ ಕಡಿಮೆ ಇದ್ದು, ಟೆಂಡರ್ ವಿಳಂಭವಾದ್ದರಿಂದ ಹಿಂದಿನ ಸಾಲಿನ ಕೊಳವೆಬಾವಿಗಳಿಗೆ NSCFDC ಸಾಲದ ಹಣವು ಖರ್ಚಾಗದೆ ಉಳಿದಿರುತ್ತದೆ. ಈಗ ಕೊಳವೆಬಾವಿ ಪೂರ್ಣಗೊಳಿಸಲು ಸಾಲದ ಅವಶ್ಯಕತೆ ಕಡಿಮೆ ಇರುವುದರಿಂದ ಹಾಗೂ ಸರ್ಕಾರದಿಂದ 2015–16ನೇ ಸಾಲಿನಲ್ಲಿ ಕ್ಯಾಪಿಟಲ್ ಹೆಡ್‌ನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಅವಧಿಸಾಲದ ಬಾಬ್ತಿಗೆ ರೂ 29.00 ಕೋಟಿಗಳನ್ನು ಸರ್ಕಾರ ನಿಗಮಕ್ಕೆ ಬಿಡುಗಡೆ ಮಾಡಿರುವುದರಿಂದ ಮತ್ತು ಈ ನಿಟ್ಟಿನಲ್ಲಿ ನಿಗಮದಲ್ಲಿ ಆರ್ಥಿಕ ಶಿಸ್ತು ಕಾಪಾಡಿಕೊಳ್ಳುವ ಉದ್ದೇಶದಿಂದ, ನಿಗಮದಿಂದ ಈ ಸಾಲಕ್ಕೆ ಅನಾವಶ್ಯಕವಾಗಿ ಬಡ್ಡಿ ಕೊಡಬೇಕಾಗಿರುವುದರಿಂದ, ಬಾಕಿ ಉಳಿದಿರುವ ರೂ. 30.50 ಕೋಟಿ ಮೊತ್ತ ಹಿಂತಿರುಗಿಸುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಮಂಡಳಿ ಸಭೆಯ ಗಮನಕ್ಕೆ ತಂದರು.

**ನಿರ್ಣಯ: ನಿರ್ದೇಶಕರ ಮಂಡಳಿ ಸಭೆಯು ವಿಷಯವನ್ನು ಮುಂದೂಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 04: ಗಂಗಾ ಕಲ್ಯಾಣ ಯೋಜನೆಯಡಿ ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳಗೆ ನೀಡಿರುವ ಗುರಿಗಳನ್ನು ಅದೇ ಜಿಲ್ಲೆಯ ಬೇರೆ ವಿಧಾನಸಭಾ ಕ್ಷೇತ್ರಗಳಗೆ ವರ್ಗಾಯಿಸುವ ಬಗ್ಗೆ.**

ಗಂಗಾ ಕಲ್ಯಾಣ ಯೋಜನೆಯಡಿ "ನೀರಿಲ್ಲದಿದ್ದರೆ ಹಣವಿಲ್ಲ" ಎಂಬ ಆಧಾರದ ಮೇಲೆ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ. ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ಗಂಟೆಗೆ 1000 ಗ್ಯಾಲನ್‌ಗಿಂತ ಹೆಚ್ಚು ನೀರಿನ ಇಳುವರಿ ದೊರೆತ ಕೊಳವೆಬಾವಿಗಳನ್ನು ಯಶಸ್ವಿ ಕೊಳವೆಬಾವಿಗಳೆಂದು ಪರಿಗಣಿಸಿ, ಪಂಪ್ ಅಳವಡಿಸಿ, ವಿದ್ಯುದ್ದೀಕರಣಗೊಳಸಲಾಗುತ್ತಿದೆ.

2014-15ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನಕ್ಕಾಗಿ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನವನ್ನು ಆಯಾ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಕೊಳವೆಬಾವಿಗಳನ್ನು ಕೊರೆಯಲು ಕ್ಷೇತ್ರವಾರು ಗುರಿ ನಿಗದಿಪಡಿಸಲಾಗಿದೆ.

ಆದರೆ ಕೆಲವೊಂದು ವಿಧಾನಸಭಾ ಕ್ಷೇತ್ರಗಳು ನಗರ ಪ್ರದೇಶವಾಗಿರುವುದರಿಂದ ಗುರಿಗೆ ತಕ್ಕಂತೆ ಅರ್ಹ ಅರ್ಜಿದಾರರು ಬಾರದೇ ಇರುವುದರಿಂದ ಕೊಳವೆಬಾವಿ ಕೊರೆಯಲು ಬಾಕಿ ಉಳದಿರುತ್ತವೆ. ಬಾಕಿ ಉಳದುಕೊಂಡಿರುವ ಕೊಳವೆಬಾವಿಗಳನ್ನು ಬೇರೆ ವಿಧಾನಸಭಾ ಕ್ಷೇತ್ರಕ್ಕೆ ವರ್ಗಾಯಿಸಿಕೊಳ್ಳಲು ಅನುಮತಿ ನೀಡುವಂತೆ ಜಿಲ್ಲಾ ವ್ಯವಸ್ಥಾಪಕರು ಕೇಳಕೊಂಡಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರಗಳಗೆ ಬಾಕಿ ಉಳದಿರುವ ಕೆಳಕಾಣಿಸಿದ ವಿಧಾಸಭಾ ಕ್ಷೇತ್ರಗಳ ಗುರಿಯನ್ನು ಅದೇ ಜಿಲ್ಲೆಯಲ್ಲಿ ಬೇಡಿಕೆ ಇರುವ ಇತರೇ ವಿಧಾನಸಭಾ ಕ್ಷೇತ್ರಗಳಗೆ ವರ್ಗಾಯಿಸಲು ಅನುಮತಿ ನೀಡುವಂತೆ ಕೆಳಕಂಡ ಜಿಲ್ಲಾವ್ಯವಸ್ಥಾಪಕರು ಸಲ್ಲಿಸಿರುವ ಪ್ರಸ್ತಾವನೆ ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ | ಜಿಲ್ಲೆ | ವಿಧಾನಸಭಾ ಕ್ಷೇತ್ರಗಳು | ಗುರಿ /ಬಾಕಿ ಉಳದಿರುವ ಗುರಿ | | |
|---|---|---|---|---|---|
| | | | 2012-13 | 2013-14 | 2014-15 |
| 1 | ಬಳ್ಳಾರಿ | ಬಳ್ಳಾರಿ ನಗರ | - | - | 17 |
| 2 | ಧಾರವಾಡ | ಹು-ಧಾ ಪೂರ್ವ | - | - | 19 |
| 2 | | ಹು-ಧಾ ಕೇಂದ್ರ | - | - | 19 |
| 3 | | ಹು-ಧಾ ಪಶ್ಚಿಮ | - | - | 19 |
| 4 | | ನವಲಗುಂದ | - | - | 10 |
| 5 | ಬೆಳಗಾವಿ | ಬೆಳಗಾವಿ ಉತ್ತರ | - | - | 9 |
| 6 | ತುಮಕೂರು | ತುಮಕೂರು ನಗರ | - | 16 | 17 |
| | | ಒಟ್ಟು | - | 16 | 110 |

ಭೌತಿಕ ಗುರಿಯನ್ನು ಹಿಂಪಡೆಯಲು ಬಂದಿರುವ ಪ್ರಸ್ತಾವನೆಗಳು

| ಕ್ರ. ಸಂ | ಜಿಲ್ಲೆ | ವಿಧಾನಸಭಾ ಕ್ಷೇತ್ರಗಳು | ಗುರಿ /ಬಾಕಿ ಉಳಿದಿರುವ ಗುರಿ | | |
|---|---|---|---|---|---|
| | | | 2012-13 | 2013-14 | 2014-15 |
| 1 | ಉತ್ತರ ಕನ್ನಡ | ಯಲ್ಲಾಪುರ | - | 3 | 2 |
| 2 | | ಹಳಿಯಾಳ | 11 | 3 | 3 |
| 3 | | ಶಿರಸಿ | 3 | 6 | 13 |
| 4 | | ಭಟ್ಕಳ | - | 9 | 14 |
| 5 | | ಕುಮಟಾ | - | 7 | 11 |
| 6 | | ಕಾರವಾರ | 1 | 8 | 12 |
| 7 | ಬೆಂಗಳೂರು(ನಗರ) | ಬೆಂಗಳೂರು(ದ) | 6 | 9 | 35 |
| | | ಆನೇಕಲ್ | - | - | 60 |
| | | ಯಲಹಂಕ | 3 | 2 | 57 |
| | | ಯಶವಂತಪುರ | - | 8 | 47 |
| | | ಬ್ಯಾಟರಾಯನಪುರ | - | - | 38 |
| | | ಮಹದೇವಪುರ | - | - | 60 |
| | ಧಾರವಾಡ | ನವಲಗುಂದ | 10 | 3 | - |
| | | ಧಾರವಾಡ(ಗ್ರಾ) | 3 | - | - |
| | | ಒಟ್ಟು | 37 | 58 | 352 |

ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ವರ್ಗಾಯಿಸಿಕೊಳ್ಳಲು ಜಿಲ್ಲಾ ವ್ಯವಸ್ಥಾಪಕರಿಗೆ ಅನುಮತಿ ನೀಡುವಂತೆಯೂ ಹಾಗೂ ಜಿಲ್ಲಾ ವ್ಯವಸ್ಥಾಪಕರು ಹಿಂಪಡೆಯುವಂತೆ ಕೇಳಿಕೊಂಡಿರುವ 447 ಕೊಳವೆಬಾವಿಗಳ ಗುರಿಯನ್ನು ಹಿಂಪಡೆದು ಕೇಂದ್ರ ಕಛೇರಿ ಮಟ್ಟದಲ್ಲಿ ಬೇಡಿಕೆಗನುಗುಣವಾಗಿ ಇತರೇ ಜಿಲ್ಲೆಗಳಿಗೆ ಹಂಚಿಕೆ ಮಾಡುವ ಬಗ್ಗೆ ಸಭೆಯ ಅನುಮತಿಯನ್ನು ಕೋರಲಾಯಿತು.

**ನಿರ್ಣಯ: ಈ ವಿಷಯದ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿತು. ನಿರ್ದೇಶಕರಾದ ಶ್ರೀ ಮಲ್ಲಪ್ಪ ಯಲ್ಲವ್ವ ಬೆಳವಡಿ ಇವರು ಧಾರವಾಡ ಜಿಲ್ಲೆಯ ಭೌತಿಕ ಗುರಿಯನ್ನು ಕುಂದಗೋಳ ಮತ್ತು ಕಲಘಟಗಿಗಳ ಕ್ಷೇತ್ರಗಳಲ್ಲಿ ಉಪಯೋಗಿಸಿಕೊಳ್ಳಲು ಸೂಕ್ತವೆಂದು ಅಭಿಪ್ರಾಯಿಸಿದರು. ಬಳ್ಳಾರಿ, ಧಾರವಾಡ, ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಉಳಿದಿರುವ ಭೌತಿಕ ಗುರಿಯನ್ನು ಜಿಲ್ಲಾ ವ್ಯವಸ್ಥಾಪಕರು ಪ್ರಸ್ತಾಪಿಸಿರುವಂತೆ ಅದೇ ಜಿಲ್ಲೆಯ ಇತರೆ ವಿಧಾನಸಭಾ ಕ್ಷೇತ್ರಗಳಲ್ಲಿ ಉಪಯೋಗಿಸಿಕೊಳ್ಳಲು ಸಭೆಯು ಒಪ್ಪಿಗೆ ನೀಡಿತು.**

**ಮುಂದುವರೆದು ಉತ್ತರ ಕನ್ನಡ, ಬೆಂಗಳೂರು ನಗರ ಮತ್ತು ಧಾರವಾಡ ಜಿಲ್ಲೆಯ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಭೌತಿಕ ಗುರಿ ಅಗತ್ಯವಿಲ್ಲದೇ ಇದ್ದು, ಆ ಗುರಿಯನ್ನು ಹಿಂಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕರು ಲಿಖಿತವಾಗಿ ತಿಳಿಸಿರುವ ಹಿನ್ನೆಲೆಯಲ್ಲಿ 447 ಭೌತಿಕ ಗುರಿಯನ್ನು ಹಿಂಪಡೆದು ಕೇಂದ್ರ ಕಛೇರಿಯಲ್ಲಿ ಕೊಳವೆಬಾವಿಗಳಿಗಾಗಿ ಸಲ್ಲಿಸಿರುವ ಮನವಿಗಳಿಗೆ ಮಂಜೂರಾತಿ ನೀಡಲು ಅನುವಾಗುವಂತೆ ಫಲಾಪೇಕ್ಷಿಗಳ ಅರ್ಹತೆ ಬಗ್ಗೆ ಪರಿಶೀಲಿಸಿ ಪಟ್ಟಿ ತಯಾರಿಸಿ ಮುಂದಿನ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆದುಕೊಳ್ಳಲು ನಿರ್ಣಯಿಸಲಾಯಿತು.**